ಗೆಣೆಯ ಘನಶ್ಯಾಮನಿಗೆ ಬೇಸರವಾಗದಂತೆ ಒಂದು ಉಪಾಯ ಯೋಚಿಸಿ ಗುಡ್ಡಪ್ಪ ಹೀಗಂದನು, "ನಿಂಗೆ ಪರಿಚಯ ಅಂತ ಬೇರೆ ಹೇಳ್ತಿಯಾ. ನೆಂಟ್ರೂ ಅಂತೀಯಾ? ಅದ್ಯಾವ್ ಟೈಪ್ ಸಂಬಂಧನೋ ಅದಕ್ಕೆ ಸಿಬಿಐ ತನಿಖೇನೆ ಆಗ್ಬೇಕು. ನೀನೂ ಮಕ ಮುರ್ಕೊಳಕೆ ಆಗಲ್ಲ. ಒಂದ್ಯೆದು ಲಕ್ಷ ರೊಕ್ಕ, ಇಪ್ಪತ್ತು ತೊಲಿ ಬಂಗಾರ ಕೇಳು. ಖರ್ಚಾಕಿ ಮದ್ವೆ ಕೇಳು" ಎಂದನು. ಗುಡ್ಡಪ್ಪನಿಗೆ ಮನಸ್ಸಲ್ಲಿ, "ಈ ಪಾಟಿ ರೊಕ್ಕ ಕೇಳಿದರೆ ಅವ್ರು ಎದೆ ಹೊಡ್ಕೊಂಡು ಸತ್ತೇ ಹೋಗ್ತಾರೆ. ಈ ಸಂಬಂಧ ಬ್ಯಾಡಾಂತ ಉಗಿದು ಅಟ್ತಾರೆ. ಅವರ ಸ್ಥಿತಿ ನೋಡಿದ್ರೆ ಹತ್ತು ಸಾವ್ರಾನೂ ಹುಟ್ಟೋದು ಕಷ್ಟ. ಹಿಂಗಾದ್ರೂ ಈ ಕನ್ಯಾ ಸವಾಸ ಬಿಟ್ಹೋಗಲಿ" ಎಂದುಕೊಂಡನು. ಆದರೆ ಮನೆಯೊಳಗೆ ಗೂಳಿಯಂತೆ ನುಸುಳಿದ ಶ್ಯಾಮ ಒಪ್ಪಿಸಿಕೊಂಡು ಬಂದೇ ಬಿಟ್ಟನು. ಗುಡ್ಡಪ್ಪ ಇನ್ನು ಕೆಮ್ಮುವಂತೆಯೂ ಇರಲಿಲ್ಲ. ಕ್ಯಾಕರಿಸುವಂತೆಯೂ ಇರಲಿಲ್ಲ. ಹೇಳಲು ನೆವಗಳೂ ಉಳಿದಿರಲಿಲ್ಲ. ಎಲ್ಲರ ಭಯಕ್ಕೆ ಕಂಗಾಲಾಗಿ ನಿಂತನು. ಆಗಲ್ಲ ಎಂದುಕೊಂಡಿದ್ದು ಆಗೇ ಹೋಗಿತ್ತು.

ಒಂದು ದಿನ ಹೆಣ್ಣು ನೋಡೋಕೆ ಗಂಗವ್ವ, ಅಕ್ಕಂದಿರು, ಸಂಬಂಧಿಕರು ಎಲ್ಲಾ ಒಂದು ಮೆಟೆಡೋರು ತುಂಬಾ ಬಂದರು. "ಅಂತೂ ಒಂದು ಹುಡುಗೀನ ಕೊನೆಗೂ ಒಪ್ಪಿದನಲ್ಲಾ" ಎಂದು ಸಂತಸಪಟ್ಟರು. ತಿಂಡಿ, ಸಿಹಿ, ಚಾಪಾನಿ ಎಲ್ಲಾ ಮುಗಿದವು. ಹುಡುಗೀನ ಇನ್ನೂ ತೋರಿಸಿರಲಿಲ್ಲ. ಒಳ ಕೋಣೆಯಲ್ಲಿ ಹೆಣ್ಣಿನ ಅಲಂಕಾರ, ಅವರ ಮಾತುಕತೆ ಬಲು ಜೋರಾಗಿ ನಡೆದಿತ್ತು. ಗಂಗವ್ವ ಒಳಗಿನ ಮಾತುಗಳು ಕಿವಿಗೆ ತಾಕುವಷ್ಟು ಸನಿಹ ಕೂತಿದ್ದಳು. ಒಳಗೆ ಅವರಾಡುತ್ತಿದ್ದ ಮಾತೇ ವಿಚಿತ್ರವಾಗಿದ್ದವು. ಹುಡುಗನ ತಾಯಿ ಮತ್ತಷ್ಟು ಕಿವಿಯ ಹೆಚ್ಚು ಮಾಡಿಕೊಂಡು ಸರಿದು ಕುಂತು ಆಲಿಸಿದಳು.

**ಆಮೇಲೆ ಇವ್ರು ಭಾಷೆ ಸಾಬ್ರದಲ್ಲ ಕಂಡ್ಲೆ. ಇದಕ್ಕೆ ಸ ಭಾಷೆ ಅಂತಾರೆ. ಅಂದ್ರೆ, ಎಲ್ಲದಕ್ಕೂ ಸ ಸೇರಿಸಿ ಮಾತಾಡ್ತಾರೆ. ಉಪ್ಪಿಟ್ಟಿಗೆ, ಉಸಿಪ್ಪಿಟ್ಟು, ಊಟಕ್ಕೆ ಉಸೂಟ ಅಂತಾರೆ. ನಿಮ್ಮವ್ವನಿಗೆ ಅದು ಸಾಬ್ರು ಮಾತ್ನಂಗೆ ಕೇಳಿಸಿದೆ. ಇವ್ರು ಒಳ್ಳೆ ಹುಡುಗಿ ಕಣೋ. ಎಲ್ಲಾ ನಿಭಾಯಿಸಿಕೊಂಡು ಹೋಗೋ ಗುಣ ಐತಂತೆ...**

ಕನ್ನೆಯ ಹಿರಿಯಕ್ಕ: ಹುಸುಡ್ಗುನ್ನ ನೊಸೋಡ್ ದ್ಯಾ (ಹುಡುಗನ್ನ ನೋಡಿದ್ಯಾ).

ಕನ್ಯಾಮಣಿ: ಇಸಿಲ್ಲಾ (ಇಲ್ಲಾ).

ಕನ್ನೆಯ ಹಿರಿಯಕ್ಕ: ಹೊಸೋಗೆ ಬಾಸೋಗಿಲು ಹಸತ್ರ ನಿಸಿತ್ಕೊಂಡು ಹುಸುಡ್ಗುನ್ನ ಒಸೊಂದ್ ಸಸಲ ನೊಸೋಡು (ಹೋಗೆ, ಬಾಗಿಲು ಹತ್ರಾ ನಿತ್ಕೊಂಡು ಹುಡುಗನ್ನ ಒಂದು ಸಲ ನೋಡ್ಬಿಡು) ಹುಡುಗಿ ಬಗ್ಗಿ ಗುಡ್ಡಪ್ಪನ ನೋಡಿ ಬಂದ ಮೇಲೆ–

ಕನ್ನೆಯ ಹಿರಿಯಕ್ಕ: ಹೆಸೇಗೆ ಇಸೀದನೆ (ಹುಡುಗ ಹೆಂಗಿದ್ದಾನೆ).

ಕನ್ಯಾಮಣಿ: ಹುಸುಡುಗ ಕಸಪ್ಪು ಇಸಿದ್ರು ಕಸಾಳ ಇಸೀದನೆ (ಹುಡುಗ ಕಪ್ಪಿದ್ರೂ ಒಳ್ಳೆ ಕಳೆ ಇದಾನೆ).